ಸೊರಗಿ ಶೀರಿಕೊಂಡಿದ್ದ. ಖಾನ ಸಾಹೇಬರು ಶಿಷ್ಯನ ಸಾವಿನಿಂದ ಖಿನ್ನತೆಗೆ ಒಳಗಾಗಿ ಒಂದು ವರ್ಷ ಗಾಯನ ಬಿಟ್ಟಿದ್ದರು. 'ಮುಂದೆ ಅವರು ಮತ್ತೆ ಹುಟ್ಟುತ್ತಾರೆ ನಮ್ಮ ಘರಾಣೆಯಲ್ಲಿಯೇ ಅವರಿಗೆ ಶಿಕ್ಷಣವಾಗುತ್ತೆ. ಅವರ ಆಸೆ ಮುಂದಿನ ಜನ್ಮದಲ್ಲಿ ಪೂರ್ತಿಯಾಗುತ್ತೆ ನೋಡುತ್ತಿರು' ಎಂದು ಅವರಜ್ಜ ಮುಘೀದ ಖಾನರಲ್ಲಿ ಹೇಳಿದ್ದರಂತೆ. ಅದರಂತೆಯೇ ಮುಘೀದ ಖಾನರು ಮಿಹಿರನಲ್ಲಿರುವ ಪ್ರತಿಭೆ ಗುರುತಿಸಿ ಅವನ ಅಪ್ಪನನ್ನು ಅದು ಹೇಗೋ ಒಪ್ಪಿಸಿ ತನ್ನ ಶಿಷ್ಯನ್ನಾಗಿ ಮಾಡಿಕೊಂಡಿದ್ದರು. ಮಿಹಿರನಿಗೆ ಅದು ದೊಡ್ಡ ವರದಾನವಾಯಿತು. ಇಲ್ಲವಾದರೆ ಅಪ್ಪ ಖಂಡಿತ ಅವನನ್ನು ಸಂಗೀತಕ್ಕೆ ಸೇರಲು ಬಿಡುತ್ತಿರಲಿಲ್ಲ. ಅಂಥಾ ದೇವರಂಥ ಗುರುಗಳು ಚಿಲ್ಲಾ ವಿಧಿಸಿರುವಾಗ ಹೇಗೆ ಇಲ್ಲ ಎನ್ನುವುದು? ಚಿಲ್ಲಾದಲ್ಲಿ ತಲ್ಲೀನರಾದರೆ ಮಾರವಾದ ಗುಂಗಲ್ಲಿ ಸೋಹನಿ ಕೈ ತಪ್ಪಿ ಹೋದರೆ? ಅವಳಿಗೂ ಅಷ್ಟು ಸಮಯ ಮಿಹಿರನನ್ನು ನೋಡದೇ ಇರಲು ಸಾಧ್ಯವಿಲ್ಲ. ಜೊತೆಗೆ ಅಪ್ಪ ಮದುವೆ ಮಾಡಿಸುವ ತುರಾತುರಿಯಲ್ಲಿದ್ದ. ಗೇಣಿ ಮಾಡುವ ರೈತನ ಮಗನನ್ನು ಮದುವೆಯಾಗುತ್ತೇನೆ ಎಂದು ಹೇಳಿ ಅಪ್ಪನನ್ನು ಒಪ್ಪಿಸಲು ಅವಳಿಂದ ಸಾಧ್ಯವಿಲ್ಲದ ಮಾತು. ನಲವತ್ತು ದಿನ ಸೋಹನಿಯನ್ನು ಭೇಟಿ ಮಾಡದೇ ಚಿಲ್ಲಾ ಖಾನೆಯಲ್ಲಿಯೇ ಕಳೆಯಬೇಕು. ಮಿಹಿರನಿಗೆ ಅದೊಂದು ಅಗ್ನಿ ಪರೀಕ್ಷೆಯೇ ಸರಿ. ಅಂದು ಎಂದಿನಂತೆ ಬಂದವಳಿಗೆ ಚಿಲ್ಲಾ ಎಂಬ ಬಂಧೀಖಾನೆಯ ವಿಷಯ ಅವನಿಂದ ತಿಳಿದಾಗ ಮೌನಕ್ಕೆ ಶರಣಾದಳು. ತನಗಾಗಿ ಅವನು ಗುರುವಿನ ಕೋಪಕ್ಕೆ ಪಾತ್ರನಾಗುವುದು ಅವಳಿಗೆ ಇಷ್ಟವಿರಲಿಲ್ಲ. ಶುಭ ಹಾರೈಸಿದಳು. ಆದರೆ, ಅವಳ ಕಂಬನಿಗಳು ಅವನು ಆರಾಧಿಸುವ ಸ್ವರಗಳಷ್ಟೇ ಸಹಜವಾದವುಗಳು. ಅಡಗಿಸಲು ಸಾಧ್ಯವಾಗಲಿಲ್ಲ.

ಮುಘೀದ ಖಾನರೊಳಗೆ ಮಾರವಾ ಮಡುಗಟ್ಟಿತ್ತು. ಆ ರಾಗ ದಟ್ಟವಾದ ವೈರಾಗ್ಯ ಭಾವವನ್ನು ಹುಟ್ಟಿಸಿ ಬಿಡುತ್ತದೆ. ಅವರಿಗೆ ಸಂಗೀತ ಸಾಧನೆಯು ಸಿದ್ಧಿಯೇನೋ ನೀಡಿತು. ಆದರೆ, ಪ್ರಸಿದ್ಧಿ ಮಾತ್ರ ಮರೀಚಿಕೆಯಾಗಿ ಉಳಿಯಿತು. ಕಲಾವಿದ ಉದ್ಯಾನದಲ್ಲಿ ಅರಳಿ ನಿಂತ ಹೂವಿನಂತೆ. ಮುಡಿಯೇರದೇ ಕಳಚಿ ಬೀಳುವ ವ್ಯಥೆಯು ನಿಧಾನಕ್ಕೆ ಅವರಲ್ಲಿ ವೈರಾಗ್ಯವಾಗಿ ಗಟ್ಟಿಯಾಗ ತೊಡಗಿತ್ತು. ಹಾಡುವ ಹಕ್ಕಿಗೆ ಜಗತ್ತಿನ ಪರಿವೆಯಿಲ್ಲ ಎಂಬುದು ನಿಜ ಆದರೆ, ಕಲೆಗಾರನಿಗೆ ಅದರಲ್ಲಿ ಸಾರ್ಥಕತೆ ಕಾಣುವುದು ಸಹೃದಯರನ್ನು ಬಹುಸಂಖ್ಯೆಯಲ್ಲಿ ತಲುಪಿದಾಗ ಮಾತ್ರ. ವಯಸ್ಸು ಐವತ್ತು ದಾಟಿತ್ತು. ಧ್ವನಿಪೆಟ್ಟಿಗೆಯ ಸ್ನಾಯುಗಳು ಸಡಿಲವಾಗುವ ವಯಸ್ಸಾಯಿತು. ಧ್ವನಿಯಲ್ಲಿ ಈಗ ತಾಲೀಮು ಮಾತ್ರ ಕಾಣಿಸುತ್ತೆ. ಆ ಸೆಳೆತವೋ ಮೋಡಿಯೋ ಇರುವುದಿಲ್ಲ. ಠುಮರಿಯ ಸಾಹಿತ್ಯದ ಭಾವಕ್ಕೆ ನ್ಯಾಯ ಒದಗಿಸುವ ಸುಕುಮಾರವಾದ ಧ್ವನಿ ತಂತು ವಯಸ್ಸಾದಂತೆ ಬತ್ತಿ ಹೋಗುತ್ತದೆ. ಹತ್ತು ವರ್ಷಕ್ಕೆ ಮೊದಲು ಹಾಡಿದಂತೆ ಈಗ ಹಾಡಲಾರರು ಅವರು. ಅವರ ಸಾಧನೆ, ಪಾಂಡಿತ್ಯ, ಹೆಸರಾಂತ ಘರಾಣೆಯ ಹಿನ್ನೆಲೆ, ಯಾವುದೂ ಅವರಿಗೆ ಯಶವನ್ನು ತರಲಿಲ್ಲ. ಅವರು ಎಂದೂ ಅದೃಷ್ಟವನ್ನು ನಂಬಲಿಲ್ಲ. ಈಗಲೂ ಅವರಿಗೆ ಜಗತ್ತಿನ ಬಗ್ಗೆ ಕೋಪವಿದೆಯೇ ಹೊರತು ದೇವರನ್ನು ನಿಂದಿಸುವುದಿಲ್ಲ. ತನ್ನ ಸಂಗೀತ ಜೀವನದ ಸೋಲಿಗೆ ಕಾರಣ ಇನ್ನೂ ಅವರಿಗೆ ಗೊತ್ತಾಗಿರಲಿಲ್ಲ. ಒಂದೊಂದು ರಾಗವನ್ನು ಮಿಹಿರನಿಗೆ ಕಲಿಸುವಾಗಲೂ ಸಂಗೀತ ರಂಗದಲ್ಲಿ ಈಗ ಚಾಲ್ತಿಯಲ್ಲಿರುವ ದೊಡ್ಡ ಗಾಯಕರು ಆ ರಾಗ ಹಾಡುವಾಗ ಮಾಡುವ ಚಿಕ್ಕ ದೊಡ್ಡ ತಪ್ಪುಗಳನ್ನು ಲೇವಡಿ ಮಾಡುತ್ತ ಅದು ಅವರ ತಪ್ಪಲ್ಲ ಅವರನ್ನು ಅಲ್ಲಿವರೆಗೂ ಕೊಂಡೊಯ್ದು ಕೂರಿಸಿದವರು ಜನರಲ್ಲವೇ? ಎಂದು ವ್ಯಂಗ್ಯ ಮಾಡಿಬಿಡುತ್ತಿದ್ದರು. ಹೊರರಾಜ್ಯಗಳ ಕಾರ್ಯಕ್ರಮಗಳು ಈಗ ಅಪರೂಪ. ಹೆಚ್ಚಿನ ಸಮಯ ಮಿಹಿರನಿಗೆ ಮೀಸಲು. ತನ್ನ ನೋವಿಗೆ ಮದ್ದಾಗಬಲ್ಲ ಮಾರವಾ ರಾಗ ಮಿಹಿರನ ಧ್ವನಿಯಿಂದ ಅವರಿಗೆ ಬೇಕಿತ್ತು. ಅದಕ್ಕೆ ಈಗ ಈ ಚಿಲ್ಲಾ.

ಚಿಲ್ಲಾ ಪ್ರಾರಂಭವಾಗಿತ್ತು. ಮಾರವಾದ ವಾದಿ ಸ್ವರ ರಿ- ಕೋಮಲ ರಿಷಭ, ಸಂವಾದಿ ದ- ದೈವತ. ರಿಷಭವು ಕತ್ತಿ ಯಾದರೆ ದೈವತವೇ ಗುರಾಣಿ. ಎರಡನ್ನು ಬಳಸಿ ನಡೆಯುವ ಅಮೂರ್ತವಾದ ಸೆಣಸಾಟದಲ್ಲಿ ಎಂಥಹ ನೋವು, ನೈರಾಶ್ಯಗಳು ಸಹ ನಾಶವಾಗಿ ಶಾಂತಿ ಶಶಿ ಉದಯಿಸುತ್ತಾನೆ. ಆದರೆ, ಶಶಿ ಶೃಂಗಾರದ ದ್ಯೋತಕವಲ್ಲ, ವೈರಾಗ್ಯದ ಬೆಳಕು ಚೆಲ್ಲುತ್ತಾನೆ. ವಾದಿ- ಸಂವಾದಿ ಸ್ವರಗಳ ನಡುವಿನ ಚಲನೆಗಳು, ಆಲಾಪಗಳು, ತಾನುಗಳು ಏಕತಾನತೆಯಿಲ್ಲದೆ ಪ್ರತಿ ಕ್ಷಣವೂ ಹೊಚ್ಚಹೊಸದಾಗಿ ಹೊಮ್ಮಬೇಕು. ಮಿಹಿರ ಪ್ರಾಮಾಣಿಕವಾಗಿ ಪ್ರತಿದಿನ ಅಭ್ಯಾಸ ನಡೆಸಿದ.